ದಿನಾಂಕ 08-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯವರ ಪರವಾಗಿ ಮೇಡಮ್ ಹೆಚ್.ಸಿ. ವಕೀಲರವರಿಂದಃ**

ಈ ದಾವೆಯನ್ನು ನೀವು ಯಾವ ಉದ್ದೇಶಕ್ಕಾಗಿ ಸಲ್ಲಿಸಿದ್ದೀರಿ ಎಂದರೆ ದಾವಾ ಆಸ್ತಿಯಲ್ಲಿ ಪಾಲು ಬೇಕೆಂದು ಕೋರಿ ಸಲ್ಲಿಸಿದ್ದೇನೆ. ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ನಿಮಗೆ ಪಾಲು ನೀಡುವುದಿಲ್ಲ ಎಂದು ಹೇಳಿದ್ದಾರೆಯೇ ಎಂದರೆ ಹೌದು. ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ವಾಸವಾಗಿದ್ದಾರೆಯೇ ಎಂದರೆ ಇಲ್ಲ. ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ಎಷ್ಟು ಪಾಲನ್ನು ಮಾಡೋಣವೆಂದು ಹೇಳಿರುತ್ತಾರೆ ಎಂದರೆ ಪಾಲು ಮಾಡಲು ಅವರು ಹೇಳಿರುವುದೇ ಇಲ್ಲ. ಪ್ರತಿವಾದಿಯವರು ಎಲ್ಲಿ ವಾಸವಾಗಿದ್ದಾರೆ ಎಂದರೆ ಕಟಪಾಡಿಯಲ್ಲಿ ವಾಸವಾಗಿದ್ದಾರೆ. ದಾವಾ ಪತ್ರದಲ್ಲಿ ತೋರಿಸಿರುವ ವಿಳಾಸ ಹಾಗೂ ನಿಮ್ಮ ಆಧಾರ್ ಕಾರ್ಡ್ ಗಳಲ್ಲಿ ನಿಮ್ಮ ವಿಳಾಸ ಮುಂಬೈದ್ದು ಆಗಿದೆ ಎಂದರೆ ಹೌದು. ನಾವು ಇಲ್ಲಿಯೂ ಸಹ ಬಂದು ಹೋಗುತ್ತೇವೆ. ದಾವಾ ಆಸ್ತಿಯಲ್ಲಿರುವ ಮನೆಯು ವಾಸಕ್ಕೆ ಯೋಗ್ಯವಾದ ಸ್ಥಿತಿಯಲ್ಲಿ ಇರುವುದಿಲ್ಲ ಎಂದರೆ ಹೌದು. ದಾವಾ ಆಸ್ತಿಯ ಭಾಗಶಃ ಅಂಶವನ್ನು ಹೈವೆ ಪ್ರಾಧಿಕಾರದವರು ಸ್ವಾಧೀನಕ್ಕೆ ತೆಗೆದುಕೊಂಡ ಕಾರಣ ಅದು ವಾಸಕ್ಕೆ ಯೋಗ್ಯವಾಗಿರುವುದಿಲ್ಲ ಎಂದರೆ ನನ್ನ ಮೈದುನ ಅವರು ಸಾಯುವವರೆಗೆ ಅಲ್ಲಿಯೇ ವಾಸವಾಗಿದ್ದರು. ನಿಮ್ಮ ಮೈದುನ ಯಾವಾಗ ತೀರಿಕೊಂಡರು ಎಂದರೆ 2020 ರಲ್ಲಿ ತೀರಿಕೊಂಡರು. ನಿಮ್ಮ ಮೈದುನ ದಾವಾ ಆಸ್ತಿಯಲ್ಲಿ ಒಬ್ಬಂಟಿಯಾಗಿ ವಾಸವಾಗಿದ್ದರೆ ಅಥವಾ ಕುಟುಂಬ ಸಮೇತ ವಾಸವಾಗಿದ್ದರೆ ಎಂದರೆ ಅವರಿಗೆ ಮದುವೆಯಾಗಿತ್ತು, ವಿವಾಹ ವಿಚ್ಚೇಧನವನ್ನು ಪಡೆದುಕೊಂಡಿದ್ದರು ಆ ಕಾರಣದಿಂದ ಒಬ್ಬಂಟಿಯಾಗಿ ವಾಸವಾಗಿದ್ದರು. ಸಾಕ್ಷಿಯವರಿಗೆ ದಿನಾಂಕ 21.09.2017 ರಂದು ಉಡುಪಿಯ ನಗರಸಭೆಯವರು ಹಿಂಬರಹವನ್ನು ನೀಡಿ ಅದರಲ್ಲಿ ದಾವಾ ಆಸ್ತಿಯಲ್ಲಿ ಉಳಿಕೆ ಆಸ್ತಿ ಎಷ್ಟು ಇದೆ ಎನ್ನುವ ಬಗ್ಗೆ ಹಿಂಬರಹವನ್ನು ನೀಡಿದ್ದಾರೆ ಎಂದು ಸೂಚಿಸಿದ್ದು ಸಾಕ್ಷಿಯವರು ಅದನ್ನು ನೋಡಿ ಹೌದು ಎನ್ನುತ್ತಾರೆ. ದಾವಾ ಆಸ್ತಿಯಲ್ಲಿದ್ದ ಮನೆಯನ್ನು ಹೈವೆ ಪ್ರಾಧಿಕಾರದವರು ಹೈವೆ ರಸ್ತೆಯನ್ನು ನಿರ್ಮಾಣ ಮಾಡಿದ್ದರಿಂದ ಭಾಗಶಃ ಹೊಡೆದು ಹಾಕಿರುವುದರಿಂದ ಉಳಿಕೆ ಕಟ್ಟಡವು ವಾಸ ಮಾಡಲು ಈಗ ಯೋಗ್ಯವಾಗಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿರುವ ಮನೆಗೆ

ಹೋಗಲು ಯಾವುದೇ ರಸ್ತೆಯು ಇರುವುದಿಲ್ಲ, ಹೈವೆ ರಸ್ತೆಯಿಂದ ಏಣಿಯನ್ನು ಇಟ್ಟುಕೊಂಡು ಅಥವಾ ಹಗ್ಗವನ್ನು ಇಟ್ಟುಕೊಂಡು ಹತ್ತಬೇಕಾಗುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಮನೆಗೆ ಹೋಗಲು ಯಾವ ಧಿಕ್ಕಿನಲ್ಲ್ ರಸ್ತೆ ಇದೆ ಎಂದರೆ ಉತ್ತರ ಧಿಕ್ಕಿನಲ್ಲಿ ಇದೆ. ದಾವಾ ಆಸ್ತಿಯ ಉತ್ತರ ಭಾಗದಲ್ಲಿ ಯಾರ ಆಸ್ತಿ ಇದೆ ಎಂದರೆ ಜೆಸ್ಸಿ ಎನ್ನುವವರ ಮನೆ ಇತ್ತು. ದಾವಾ ಆಸ್ತಿಯ ಪೂರ್ವದಲ್ಲಿ ಡಿಕ್ರೂಸ್ ರವರ ಮನೆ ಹಾಗೂ ಸ್ವಲ್ಪ ತೋಟ ಇದೆ. ದಾವಾ ಆಸ್ತಿಯ ದಕ್ಷಿಣದಲ್ಲಿ ವಕೀಲರಾದ ಸಿ.ಆರ್. ಕಲ್ಮಾಡಿಯವರ ಮನೆ ಇದೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಹೈವೆ ರಸ್ತೆ ಇದೆ. ದಾವಾ ಆಸ್ತಿಯು ಹೈವೆ ರಸ್ತೆಯಿಂದ ಸುಮಾರು 500 ಅಡಿ ಎತ್ತರದಲ್ಲಿ ಇದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿರುವ ಮನೆಯ ಬಾಗಿಲಿನ ಸಂಖ್ಯೆ ಎಷ್ಟು ಎಂದರೆ 4-4-5 ಆಗಿರುತ್ತದೆ. ದಾವಾ ಆಸ್ತಿಯ ತೀರುವೆಯನ್ನು ನೀವು ಕಟ್ಟಿರುತ್ತೀರಾ ಎಂದರೆ ಇಲ್ಲ. ಎಷ್ಟು ತೀರುವೆ ಇದೆ ಎಂದರೆ ಗೊತ್ತಿಲ್ಲ, ಆದರೆ ನನ್ನ ಗಂಡನವರು ಕಟ್ಟುತ್ತಿದ್ದರು. ನಿಮ್ಮ ಗಂಡನವರು ತೀರುವೆ ಕಟ್ಟಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಬಹುದೇ ಎಂದರೆ ಇಲ್ಲ. ನೀವು ಮದುವೆಯಾದ ಹೊಸದರಲ್ಲಿ ಮಾತ್ರವೇ ದಾವಾ ಆಸ್ತಿಯಲ್ಲಿದ್ದ ಮನೆಗೆ ಹೋಗಿರುತ್ತೀರಿ ಎಂದರೆ ಸರಿಯಲ್ಲ. ನಾನು ನನ್ನ ಮೈದು ಮೃತರಾದ ನಂತರವೂ ಸಹ ಹೋಗಿರುತ್ತೇನೆ.

ನಿಮ್ಮ ಗಂಡನವರು ಯಾವ ದಿನದಂದು ತೀರಿಕೊಂಡಿರುತ್ತಾರೆ ಎಂದರೆ ದಿನಾಂಕ 14.08.2017 ರಂದು ತೀರಿಕೊಂಡಿದ್ದಾರೆ. ನಿಮ್ಮ ಗಂಡನವರು ತೀರಿಕೊಳ್ಳುವ ಪೂರ್ವದಲ್ಲಿ ಅವರ ತಾಯಿಯವರನ್ನು ನೋಡಲು ಊರಿಗೆ ಬಂದಿರುತ್ತಾರೆಯೇ ಎಂದರೆ ಹೌದು. ನಿಮ್ಮ ಗಂಡನವರು ಅವರ ತಾಯಿಯವರನ್ನು ನೋಡಲು ಕಟಪಾಡಿಯಲ್ಲಿರುವ ಆಸ್ತಿಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿದ್ದ ಮನೆಗೆ ಬಂದಿದ್ದರು. ನಿಮ್ಮ ಗಂಡನವರು ಅವರ ತಾಯಿಯವರನ್ನು ನೋಡಲು ಕೊನೆಯ ಬಾರಿ ಬಂದಿದ್ದ ಸಮಯದಲ್ಲಿ ಅವರ ತಾಯಿಯವರು 5 ಲಕ್ಷ ರೂ.ಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ, 1 ಲಕ್ಷ ರೂ.ಗಳನ್ನು ನೀಡಿರುತ್ತಾರೆ. ನಿಮ್ಮ ಗಂಡನವರು ತೀರಿಕೊಂಡ ನಂತರ ಅವರ ತಾಯಿಯವರು ತೀರಿಕೊಂಡಿದ್ದಾರೆ ಎಂದರೆ ಹೌದು. ನಿಮ್ಮ ಗಂಡನವರು ತೀರಿಕೊಂಡಾಗ ದೊರೆತ ಮರಣದ

ಸೌಲಭ್ಯಗಳಲ್ಲಿ ನಿಮ್ಮ ಗಂಡನವರ ತಾಯಿಯವರಿಗೆ ಪಾಲು ನೀಡಿದ್ದೀರಾ ಎಂದರೆ ಇಲ್ಲ. ನಿಮ್ಮ ಗಂಡನವರು ಜೀವಂತವಾಗಿರುವ ಕಾಲದಲ್ಲಿ ನಿಮ್ಮ ಎದುರಿನಲ್ಲಿ ಹಾಗೂ ನಿಮ್ಮ ಗಂಡನವರ ಉಳಿದ ಸಹೋದರ ಸಹೋದರಿಯರ ಎದುರಿನಲ್ಲಿ ಅವರ ತಾಯಿಯವರಿಗೆ ಊರಿನಲ್ಲಿರುವ ಆಸ್ತಿಯನ್ನು ಅವರ ಸಹೋದರನಿಗೆ ಅಂದರೆ ನಿಮ್ಮ ಮೈದುನನಿಗೆ ನೀಡುವಂತೆ ಬಾಯಿ ಮಾತಿನಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. 1959 ರಲ್ಲಿ ನಿಮ್ಮ ಗಂಡನವರ ತಂದೆ ಹಾಗೂ ನಿಮ್ಮ ಗಂಡನವರ ತಾಯಿಯವರು ದಾವಾ ಆಸ್ತಿಯನ್ನು ಜಂಟಿಯಾಗಿ ಖರೀದಿ ಮಾಡಿರುತ್ತಾರೆ ಎಂದರೆ ಹೌದು. 1959 ರ ಕ್ರಯಪತ್ರದ ಮೂಲ ಪ್ರತಿಯನ್ನು ಅಥವಾ ಅದರ ದೃಢೀಕೃತ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇದೆಯೇ ಎಂದರೆ ತೊಂದರೆ ಇರುವುದಿಲ್ಲ, ಸದ್ಯಕ್ಕೆ ಅದು ನನ್ನ ಬಳಿ ಇಲ್ಲ. ಮುಂದಿನ ದಿನದಲ್ಲಿ 1959 ರ ಕ್ರಯಪತ್ರವನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಬಹುದು ಎಂದರೆ ಪ್ರಯತ್ನಿಸುತ್ತೇನೆ. 1959 ರಲ್ಲಿ ಕ್ರಯಪತ್ರವನ್ನು ಪಡೆದುಕೊಳ್ಳುವ ಕಾಲಕ್ಕೆ ದಾವಾ ಆಸ್ತಿಯಲ್ಲಿ ಕಟ್ಟಡ ಇತ್ತು ಎಂದರೆ ಅದು ನನಗೆ ಗೊತ್ತಿಲ್ಲ. 1992 ರಲ್ಲಿ ನಾನು ಮದುವೆಯಾದಾಗ ಇತ್ತು. ದಾವಾ ಆಸ್ತಿಯಲ್ಲಿದ್ದ ಮನೆಯನ್ನು ನಿಮ್ಮ ಗಂಡನವರ ತಂದೆ ಹಾಗೂ ನಿಮ್ಮ ಗಂಡನವರ ತಾಯಿಯವರು ನಿಮ್ಮ ಮದುವೆಯ ಪೂರ್ವದಲ್ಲಿ ನಿರ್ಮಾಣ ಮಾಡಿರುತ್ತಾರೆ ಎಂದರೆ ಹೌದು. ನಿಮ್ಮ ವಾದ ಪತ್ರದ 3 ನೇ ಖಂಡಿಕೆಯಲ್ಲಿ ಹೇಳಿರುವಂತಹ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿದ್ದ ಮನೆಯನ್ನು ದುರಸ್ಥಿ ಮಾಡಲು ನಿಮ್ಮ ಗಂಡನವರು ಹಣವನ್ನು ಖರ್ಚು ಮಾಡಿದ್ದಾರೆಂದು ತೋರಿಸುವ ಯಾವುದಾದರೂ ದಾಖಲೆಯನ್ನು ಹಾಜರು ಮಾಡಿದ್ದೀರಾ ಎಂದರೆ ಅವರು ನಗದು ರೂಪದಲ್ಲಿ ಹಣವನ್ನು ನೀಡುತ್ತಿದ್ದರು, ದಾಖಲೆ ಇರುವುದಿಲ್ಲ. ನಿಮ್ಮ ಗಂಡನವರ ತಂದೆ ಹಾಗೂ ನಿಮ್ಮ ಗಂಡನವರ ತಾಯಿಯವರು ಜಂಟಿಯಾಗಿ ಆಸ್ತಿಯನ್ನು ಖರೀದಿ ಮಾಡಿದ್ದರಿಂದ ಅವರಿಬ್ಬರಿಗೂ ಸಮಾನವಾದ ಹಕ್ಕು ಇತ್ತು ಎಂದರೆ ಹೌದು. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನೀವು ಮತ್ತು ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ಒಟ್ಟಿಗೆ ದಾವಾ ಆಸ್ತಿಯ ವಿಚಾರವಾಗಿ ಮಾತನಾಡಿದ್ದೀರಾ ಎಂದರೆ ಇಲ್ಲ. ಪ್ರತಿವಾದಿಯವರು ನಿಮ್ಮನ್ನು ದಾವಾ ಆಸ್ತಿಯಿಂದ ಹೊರಗೆ ತಳ್ಳಿದ್ದಾರೆಯೇ ಎಂದರೆ ಇಲ್ಲ. ನೀವು ಮತ್ತು ಪ್ರತಿವಾದಿಯವರು ಮಾತುಕತೆಯನ್ನು

ಮಾಡುತ್ತೀರಾ ಎಂದರೆ ದಾವೆಯನ್ನು ಸಲ್ಲಿಸಿದ ನಂತರ ಮಾತುಕತೆಯನ್ನು ಮಾಡುತ್ತಿರಲಿಲ್ಲ. ಯಾವ ಕಾರಣದಿಂದ ನಿಮ್ಮ ಹಾಗೂ ಪ್ರತಿವಾದಿಯವರ ನಡುವೆ ವೈಮನಸ್ಸು ಉಂಟಾಗಿರುತ್ತದೆ ಎಂದರೆ ಅದನ್ನು ಹೇಳಲಾಗುವುದಿಲ್ಲ. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ದಾವಾ ಆಸ್ತಿಯ ವಿಚಾರವಾಗಿ ಲೆಸ್ಲಿ ಅರೋದ ರವರು ನಿಮ್ಮ ಹಾಗೂ ಪ್ರತಿವಾದಿಯವರ ನಡುವೆ ಮಾತುಕತೆಯನ್ನು ಆಡಿ ಕಳುಹಿಸಿದ್ದರು ಎಂದರೆ ಹೌದು. ನೀವು 5 ಲಕ್ಷ ರೂ.ಗಳಿಗೆ ನಿಮ್ಮ ಆಸ್ತಿಯ ಹಕ್ಕನ್ನು ಬಿಟ್ಟುಕೊಡುವುದಾಗಿ ಒಪ್ಪಿ, ನಿಮಗೆ ಹಾಗೂ ನಿಮ್ಮ ಮಕ್ಕಳಿಗೆ ಸಂಬಂಧಿಸಿದ ಆಧಾರ್ ಕಾರ್ಡ್, ಫೋಟೋ, ಇತರೆ ದಾಖಲೆಗಳನ್ನು ನೀಡಿರುವುದು ಎಂದರೆ ಹೌದು. ಖಾತೆಯಾದ ನಂತರ ಪ್ರತಿವಾದಿಯವರು 5 ಲಕ್ಷ ರೂ.ಗಳನ್ನು ನೀಡಲು ತಯಾರಿದ್ದೇನೆ, ಹಕ್ಕು ಬಿಡುಗಡೆ ಪತ್ರವನ್ನು ಮಾಡಿಕೊಡಿ ಎಂದು ಕೇಳಿರುತ್ತಾರೆ ಎಂದರೆ ಅವರು ಯಾವುದೇ ಹಣವನ್ನು ನೀಡಿರುವುದಿಲ್ಲ ಹಾಗೂ ಕೇಳಿಕೊಂಡಿರುವುದಿಲ್ಲ. ಖಾತೆ ಆಗುವ ಮೊದಲೇ 5 ಲಕ್ಷ ರೂ.ಗಳನ್ನು ಪ್ರತಿವಾದಿಯವರು ನಿಮಗೆ ಕೊಡಲು ಒಪ್ಪಿಕೊಂಡಿರುವುದು ಸರಿಯೇ ಎಂದರೆ ಕೂಡಲೇ ಕೊಡುವುದಾಗಿ ಒಪ್ಪಿಕೊಂಡಿದ್ದರು. ದಾವಾ ಆಸ್ತಿಯ ಖಾತೆಯನ್ನು ಮಾಡುವುದು ನಿಮ್ಮ ಗಂಡನವರು, ನಿಮ್ಮ ಮೈದುನ, ನಿಮ್ಮ ಗಂಡನವರ ತಂದೆ ಹಾಗೂ ನಿಮ್ಮ ಗಂಡನವರ ತಾಯಿಯವರು ತೀರಿಕೊಂಡ ನಂತರವೇ ವಾರಸು ಖಾತೆಯನ್ನು ಮಾಡುವುದು ಎಂದರೆ ಹೌದು. 2020-21 ನೇ ಸಾಲಿನಲ್ಲಿ ಕೊರೊನಾ ಖಾಯಿಲೆಯು ಹರಡಿದ್ದರಿಂದ 2024 ರಲ್ಲಿ ದಾವಾ ಸ್ವತ್ತಿಗೆ ಇರುವಷ್ಟು ಮೌಲ್ಯ ಆಗ ಇರಲಿಲ್ಲ, ಅದು ಸ್ಥಿರವಾಗಿತ್ತು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.